ಕರ್ನಾಟಕ ಸರ್ಕಾರ

# ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು.

ಉರ್ವಾಸ್ಟೋರ್ಸ್, ಅಶೋಕನಗರ ಅಂಚೆ, ಮಂಗಳೂರು–575 006.
ದೂರವಾಣಿ: 2459555 (ಅಧ್ಯಕ್ಷರು): 2459565 (ಕಛೇರಿ)ಫ್ಯಾಕ್ಸ್: 2459545
E-mail: muda_commissioner@yahoo.co. in

ಉಲ್ಲೇಖ: ಮನಪ್ರಾ/ನಿವೇಶನ/(115)/2026–27 ದಿನಾಂಕ: 29/09/2026

## ಈ– ಹರಾಜು ಪ್ರಕಟಣೆ

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಸೋಮನಾಥ ಬಡಾವಣೆಯಲ್ಲಿ ಖಾಲಿ ಇರುವ ನಿವೇಶನಗಳಾದ

1) ಮೂಲೆ ನಿವೇಶನ ಸಂಖ್ಯೆ 183 (52.88 ಚ.ಮೀ).

ಬಡಾವಣೆಗಳ ನಿವೇಶನಗಳನ್ನು ಸಾರ್ವಜನಿಕ ಟೆಂಡರು ಮೂಲಕ ವಿಲೀನಗೊಳಿಸಲು ತೀರ್ಮಾನಿಸಲಾಗಿದೆ. ಆಸಕ್ತರು ಇ–ಪೋರ್ಟಲ್ ಮುಖಾಂತರ ನೋಂದಣಿ ಮಾಡಿಸಿಕೊಂಡು ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್ಮೆಟ್ ಪೋರ್ಟಲ್ http://kppp.karnataka.gov.in ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ಪ್ರಕಾರ ಅರ್ಜಿ ಸಲ್ಲಿಸಬಹುದು. (AS IS WHERE IS BASIS)

### ಇ–ಹರಾಜಿಗೆ ವಿವಿಧ ಪ್ರಕ್ರಿಯೆಗಳ ವೇಳಾಪಟ್ಟಿ

| ಕ್ರ.ಸಂಖ್ಯೆ. | ವಿವರ | ದಿನಾಂಕ |
|---|---|---|
| 1. | ಇ–ಹರಾಜು ಅಧಿಸೂಚನೆಯ ದಿನಾಂಕ | ದಿನಾಂಕ 29–09–2026 |
| 2. | ಇ–ಪೋರ್ಟಲ್‌ನಲ್ಲಿ ಅನುಬಂಧ ಎ ಮತ್ತು ಅನುಬಂಧ ಬಿ ಘೋಷಣೆಯಲ್ಲಿನ ಅರ್ಹತಾ ಮಾನದಂಡಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ | ದಿನಾಂಕ 15–10–2026ರಂದು ಸಾಯಂಕಾಲ 5.30 ಘಂಟೆಗೆ ಮುಂಚಿತವಾಗಿ |
| 3. | ಲೈವ್ ಬಿಡ್ಡಿಂಗ್ | ದಿನಾಂಕ 16.10.2026 ಬೆಳ್ಳಿಗೆ 10.30 ಘಂಟೆಗೆ ಪ್ರಾರಂಭವಾಗಿ ಸಾಯಂಕಾಲ 5.30 ಘಂಟೆಗೆ ಮುಕ್ತಾಯವಾಗುತ್ತದೆ. |

ಆಸಕ್ತರು ಆನ್‌ಲೈನ್ ಮೂಲಕ ಭಾಗವಹಿಸಬೇಕಾಗುತ್ತದೆ. http://kppp.karnataka.gov.in ವೆಬ್‌ಸೈಟ್ ಮುಖಾಂತರ ಇ–ಹರಾಜು ದಾಖಲೆಗಳನ್ನು ನೋಡಬಹುದು ಮತ್ತು ಪಡೆಯಬಹುದು.

**ಸೂಚನೆ** : ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ http://kppp.karnataka.gov.in ರಲ್ಲಿರುವ ಟೆಂಡರು ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದಾಗಿದೆ. ಬಿಡ್ಡಿಂಗ್ ಕುರಿತಾದ ಷರತ್ತು ಹಾಗೂ ಯಾವುದೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪ್ರಾಧಿಕಾರದ ಕಛೇರಿಯಿಂದ ಪಡೆಯಬಹುದಾಗಿದೆ. ಟೆಂಡರ್ ಕ್ಯಾಲೆಂಡರ್ ಅನ್ನು ಮುಂದೂಡುವುದು (ಯಾವುದಾದರೂ ಇದ್ದರೆ) ಇ ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಧಿಸೂಚಿಸಲಾಗುವುದು ಮತ್ತು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಆಯುಕ್ತರು,
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ,
ಮಂಗಳೂರು.

ಷರತ್ತುಗಳು:

1) ಹರಾಜಿನಲ್ಲಿ ಪಾಲ್ಗೊಳ್ಳುವವರು ಭಾರತೀಯ ಪ್ರಜೆಯಾಗಿರಬೇಕು,
2) ಇ-ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಇ-ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು https:/kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಡೌನ್‌ಲೋಡ್‌ನಲ್ಲಿ ಟೆಂಡರ್‌ದಾರರಿಗೆ ಬಳಕೆದಾರರ ಕೈಪಿಡಿಗಳು ಇಲ್ಲಿ New e-Auction Bidding user manual ಅನ್ನು ಡೌನ್ ಲೋಡ್, ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್- 080-46010000 ಮತ್ತು 080-68948777 ಗೆ ಸಂಪರ್ಕಿಸಬಹುದು.
3) ಹರಾಜಿನಲ್ಲಿ ಪಾಲ್ಗೊಳ್ಳುವವರು https:/kppp.karnataka.gov.in ವೆಬ್ ಸೈಟ್ ನಿಂದ ನಿಗಧಿತ ಮಾದರಿ ಸಹಿಯ ನಮೂನೆ (ಇದರಲ್ಲಿ ಅರ್ಜಿದಾರರ ಹೆಸರು ಮತ್ತು ತಂದೆಯ ಹೆಸರನ್ನು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ನಮೂದಿಸುವುದು) ಹಾಗೂ ಸಂಪರ್ಕದ ಮಾಹಿತಿಯ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್ನಲ್ಲಿ ಅಪಲೋಡ್ ಮಾಡಬೇಕಾಗಿರುತ್ತದೆ.
4) ಇ-ಹರಾಜಿನ ಮೂಲಕ ನಿವೇಶನವನ್ನು ಜಂಟಿಯಾಗಿ ಖರೀದಿಸುವವರು ಜಂಟಿಯಾಗಿ ದಾಖಲೆಗಳನ್ನು ಇ-ಹರಾಜಿನ ಪೋರ್ಟಲ್‌ನಲ್ಲಿ ಅಪಲೋಡ್ ಮಾಡಬೇಕು.
5) ಹರಾಜಿಗೊಳಪಡಿಸಿರುವ ನಿವೇಶನಗಳು ಎಲ್ಲಿ ಹೇಗೆ ಇ ವೆಯೋ ಅದೇ ಸ್ಥಿತಿಯಲ್ಲಿ ಯಶಸ್ವಿ ಬಿಡ್ಡುದಾರರಿಗೆ ಹಂಚಿಕೆ ಮಾಡಲಾಗುವುದು, ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ನಿವೇಶನದ ಸ್ಥಳ, ರಸ್ತೆಯ ಅಗಲ ಮುಂತಾದವುಗಳನ್ನು ಖುದ್ದಾಗಿ ಪರಿಶೀಲಿಸಿಕೊಂಡು ಹರಾಜಿನಲ್ಲಿ ಭಾಗವಹಿಸುವುದು, ರಸ್ತೆಯ ಅಗಲದ ವ್ಯತ್ಯಾಸ ಅಥವಾ ಇನ್ನ್ಯಾವುದೇ ಕಾರಣಗಳಿಂದ ಹರಾಜಿನಲ್ಲಿ ಪಡೆದ ನಿವೇಶನಗಳನ್ನು ರದ್ದುಪಡಿಸಲಾಗುವುದಿಲ್ಲ / ಬದಲಿ ನಿವೇಶನ ನೀಡಲಾಗುವುದಿಲ್ಲ ಹಾಗೂ ಹರಾಜಿನಲ್ಲಿ ಹಂಚಿಕೆಯಾದ ನಿವೇಶನಗಳಿಗೆ ಬದಲಿ ನಿವೇಶನ ನೀಡಲು ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ
6) ಪ್ರತಿ ನಿವೇಶನದ ಹರಾಜಿನಲ್ಲಿ ಕನಿಷ್ಠ ಇಬ್ಬರು ಬಿಡುವಾರರು ಭಾಗವಹಿಸಬೇಕಾಗಿರುತ್ತದೆ. ಒಬ್ಬರೇ ಬಿಡ್ಡುದಾರರು ಇದ್ದಲ್ಲಿ ಅಂತಹ ಬಿಡ್ಡನ್ನು ತಿರಸ್ಕರಿಸಲಾಗುವುದು,
7) ಇ-ಹರಾಜಿನ ಅಂತಿಮ ದಿನಾಂಕದ ಅಂತಿಮ ಸಮಯ/ಕಣದಲ್ಲಿ ಪ್ರಗತಿಯಲ್ಲಿರುವ ಬಿಡ್ಡುಗಳಿಗೆ ಪ್ರತಿ ಬಿಡ್ಡಿಗೆ 5 ನಿಮಿಷ ಕಲ್ವಾ ಟೈಂ ಇದ್ದು, ಉದಾ: ಹರಾಜು ಅಂತ್ಯವಾಗುವ ವೇಳೆ 16.00 ಆಗಿದ್ದು, ನೀವು 15.57 ಕ್ಕೆ ಬಿಡ್ ಮಾಡಿದಾಗ 16.02 ರವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಇದು ಅಂತಿಮವಾಗುವವರೆಗೆ ವಿಸ್ತರಣೆಯಾಗುತ್ತಾ ಹೋಗುತ್ತದೆ.
8) ಹರಾಜಿಗೊಳಪಡಿಸಲ್ಪಟ್ಟಿರುವ ನಿವೇಶನಗಳ ದರ ರೂ.100 ಕೋಟಿಗಿಂತ ಕಡಿಮೆ ಇದ್ದರೆ ರೂ.2.00 ಲಕ್ಷ ಇ.ಎಂ.ಡಿ - ICICI DEBIT CARD/CREDIT CARD/NET BANKING ಇದರೊಂದಿಗೆ ಹರಾಜು ಸೇವಾ ಶುಲ್ಕವನ್ನು ಬಿಡ್ಡುದಾರರೇ ಭರಿಸತಕ್ಕದ್ದು
9) ರೂ.1.00 ಕೋಟಿಗಿಂತ ಕಡಿಮೆ ಮೌಲ್ಯದ ನಿವೇಶನಗಳಿಗೆ ಕನಿಷ್ಠ ಬಿಡ್ ಏರಿಕೆ ಮೊತ್ತ ರೂ.5000 /-
10) ಅತ್ಯಧಿಕ ಮೊತ್ತದ ಬಿಡ್ಡುದಾರರು ಬಿಡ್ ಅಂಗೀಕತವಾದ ಬಗ್ಗೆ https:/kppp karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿಕೊಂಡು ಬಿಡ್ ಮೌಲ್ಯದ ಶೇ.25 ರಷ್ಟು ಹಣವನ್ನು ಅವರ ಸ್ವಂತ ಬ್ಯಾಂಕ್ ಖಾತೆಯಿಂದ 72 ಗಂಟೆಯೊಳಗಾಗಿ ಖಾತೆದಾರರು ಆಯುಕ್ತರು, ಮ.ನ.ಪ್ರಾ. ಮಂಗಳೂರು ರವರ ಹೆಸರಿನಲ್ಲಿರುವ Commissioner MUDA Mangalore, Bank of Baroda, Account No.73600100014939 (IFSC Code No. BARBOVJASDA) (5TH WORD IS ZERO) ಹಣ ಪಾವತಿಸಿದ ಬಗ್ಗೆ, ದಾಖಲಾತಿ ಒದಗಿಸುವ ಸಂದರ್ಭದಲ್ಲಿ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಸಲ್ಲಿಸುವುದು, ಯಶಸ್ವಿ ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 25 ಭಾಗ ಹಣ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಸದರಿ ನಿವೇಶನವನ್ನು ಮರು ಹರಾಜಿಗೆ ಒಳಪಡಿಸಲಾಗುವುದು.

ಆಯುಕ್ತರು,
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ,
ಮಂಗಳೂರು

11) ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹಿಂಪಡೆಯುವ ಹಕ್ಕನ್ನು ಮ.ನ.ಪ್ರಾ. ಮಂಗಳೂರು ಕಾಯ್ದಿರಿಸಿಕೊಂಡಿದೆ.

12) ಹರಾಜಾದ ನಿವೇಶನಗಳನ್ನು 1991ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಬಿಡಿ ನಿವೇಶನಗಳ ಹಂಚಿಕೆ) ನಿಯಮ ಕಲಂ 6 ರನ್ವಯ ಅಂತಿಮ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಆಯುಕ್ತರು, ಮಂಗಳೂರು ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು ರವರು ಹೊಂದಿರುತ್ತಾರೆ.

13) ಇ-ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಂಡ ನಂತರ ಇ.ಎಂ.ಡಿ ಮೊತ್ತವನ್ನು https://kppp.karnataka.gov.in ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿ ಮಾಡಲು ಕ್ರಮವಹಿಸುತ್ತಾರೆ.

14) ಬಿಡ್ಡುದಾರರಿಗೆ ಬಿಡ್ಡಿನಲ್ಲಿ ಅಂತಿಮಗೊಂಡ ನಿವೇಶನಗಳನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಒಟ್ಟು ವಿಸ್ತೀರ್ಣದಲ್ಲಿ ಕಡಿಮೆ ಇದ್ದಲ್ಲಿ ಪಾವತಿಸಲ್ಪಟ್ಟಿರುವ ಹೆಚ್ಚುವರಿ ಮೊತ್ತವನ್ನು ಮರುಪಾವತಿಸಲಾಗುವುದು ಹಾಗೂ ಹೆಚ್ಚುವರಿ ವಿಸ್ತೀರ್ಣವಿದ್ದಲ್ಲಿ, ಸದರಿ ವಿಸ್ತೀರ್ಣಕ್ಕೆ ಹೆಚ್ಚುವರಿ ಹಣ ಪಾವತಿಸಲು ತಿಳುವಳಿಕೆ ನೀಡಲಾಗುವುದು. ಇದಕ್ಕೆ ಬಿಡ್ಡುದಾರರು ಒಪ್ಪದಿದ್ದಲ್ಲಿ ಸದರಿಯವರು ಪಾವತಿಸಿರುವ ಶೇ.25 ರಷ್ಟು ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ಹರಾಜನ್ನು ರದ್ದುಗೊಳಿಸಲಾಗುವುದು.

15) ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 75 ರಷ್ಟು ಹಣವನ್ನು ಸಹ ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಪಾವತಿಸಿದ ನಂತರ ಹಣ ಪಾವತಿಸಿರುವ ರಸೀದಿ ಪ್ರತಿಯೊಂದಿಗೆ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸುವುದು.

16) ಬಿಡ್ಡುದಾರರಿಗೆ ಬಿಡ್ಡು ಮೊತ್ತದ ಉಳಿಕೆ ಶೇ.75 ರಷ್ಟು ಮೊತ್ತ ಪಾವತಿಸಲು ಬಡ್ಡಿ ರಹಿತವಾಗಿ ಹರಾಜು ಸ್ಥಿರೀಕರಣ ಪತ್ರ ಸ್ವೀಕರಿಸಿದ ದಿನಾಂಕದಿಂದ 45 ದಿವಸಗಳು ಅವಕಾಶವಿದ್ದು, ನಂತರದ 90 ದಿನಗಳ ಅವಧಿಗೆ ಶೇ.18 ರ ಬಡ್ಡಿ ದರದಲ್ಲಿ ಹಾಗೂ ತದನಂತರದ 30 ದಿನಗಳ ಅವಧಿಗೆ ಶೇ.21 ರ ಬಡ್ಡಿ ದರದಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಪಾವತಿಸಲು ಅವಕಾಶವಿರುತ್ತದೆ.

17) ಆದಾಯ ತೆರಿಗೆ ಕಾಯ್ದೆ 1961 ರ ಕಾಲಂ 194 ಐಎ ಪ್ರಕಾರ ಹರಾಜಾದ ಸ್ವತ್ತಿನ ಒಟ್ಟು ಮೊತ್ತವು ರೂ.50.00 ಲಕ್ಷ ಮೀರಿದ ಪ್ರಕರಣಗಳಲ್ಲಿ ಹರಾಜು ಖರೀದಿದಾರರು ನಿವೇಶನದ ಒಟ್ಟು ಮೊತ್ತದಲ್ಲಿ ಶೇಕಡ 1 ರಷ್ಟು ಮೊತ್ತವನ್ನು ಕಟಾಯಿಸಿ, ಆದಾಯ ತೆರಿಗೆ ಇಲಾಖೆ ಪಾವತಿಸತಕ್ಕದ್ದು,

ಆಯುಕ್ತರು,
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ,
ಮಂಗಳೂರು.